### ಮಾರ್ಮಿಕ ಬರಹ




'ಕುಸಿಯಿತೇ ಕೊಡಗು' ಪ್ರವೀಣ ಕುಲಕರ್ಣಿ ಅವರ ಮುಖಪುಟ ಲೇಖನ (ಸುಧಾ, ಸೆ. 6) ಮಾರ್ಮಿಕವಾಗಿದೆ. 'ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ' ಎಂದು ಕವಿ ಹಾಡಿ ಹೊಗಳಿದ ಕೊಡಗು ಇಂದು ನಿಜಕ್ಕೂ ನರಕ ಸದೃಶವಾಗಿದೆ. ಕೊಡಗು ಇನ್ನಷ್ಟು ಕುಸಿಯದಿರಲು ದೃಢ ಸಂಕಲ್ಪ ಮಾಡೋಣ.

—ಮುಕುಂದ ಹೆರಕಲ್ಲ ಕಲಬುರ್ಗಿ, ಮೇ.ಗೋ. ಸುಬ್ಬಣ್ಣ ಮೇಗರವಳ್ಳಿ, ಚನ್ನಬಸವ ಪುತ್ತೂರ ಚಿತ್ರದುರ್ಗ, ಎಚ್.ಆನಂದಕುಮಾರ್ ಚಿತ್ರದುರ್ಗ, ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ, ಪಿ.ಗೋವಿಂದರಾಜ್ ಶಿವಮೊಗ್ಗ, ಅಮೃತೇಶ ತಂಡರ ಅಣ್ಣಿಗೇರಿ, ಮಧುರ ಸುಬ್ರಹ್ಮಣ್ಯ ಬೆಂಗಳೂರು, ಎಸ್.ಚನ್ನಪ್ಪ ಮೈಸೂರು

### ಕೊಡಗನ್ನು ಉಳಿಸೋಣ

ಕರ್ನಾಟಕದ ಹೆಮ್ಮೆಯ ಜಿಲ್ಲೆ, ಕನ್ನಡಿಗರ ಕಾಶ್ಮೀರ ಎಂದೆಲ್ಲ ಕರೆಸಿಕೊಳ್ಳುತ್ತಿದ್ದ ಕೊಡಗು ಜಿಲ್ಲೆ ಇದೀಗ ಕಷ್ಟದಲ್ಲಿದೆ. ಇನ್ನು ಉಳಿಸುವತ್ತ ಶಕ್ತಿಮೀರಿ ಪ್ರಯತ್ನಿಸೋಣ.

—ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

### 'ಕೊಡಗಿನ ಜನರು'

ಕೊಡಗು ಕುರಿತ ಲೇಖನದಲ್ಲಿ ಧೀರ ಕೊಡವರು, ಕೊಡವ ಸಮುದಾಯದ ಹಿತ, ಕೊಡವರ ಜೀವನ್ಮುಖಿ ಪಯಣ ಎಂಬ ಪದಗಳ ಬಳಕೆಯಾಗಿದೆ. ಕೊಡಗಿನಲ್ಲಿ ವಾಸವಿರುವ ಎಲ್ಲರೂ ಕೊಡವರಲ್ಲ. ಕೊಡವ (ಕೂರ್ಗಿ) ಎಂಬುದು ಒಂದು ಜನಾಂಗ ಮಾತ್ರ. ಅಲ್ಲಿ ಕೊಡವರು, ಗೌಡರು, ಲಿಂಗಾಯಿತರು, ಮುಸಲ್ಮಾನರು, ಬ್ರಾಹ್ಮಣರು ಹಾಗೂ ಇತರ ಸಮುದಾಯದವರೂ ಇದ್ದಾರೆ. ಹೀಗಾಗಿ ಲೇಖನದಲ್ಲಿ ಕೊಡಗಿನವರು ಅಥವಾ ಕೊಡಗಿನ ಜನರು ಎಂದು ಬರೆದರೆ ಇತರ ಸಮುದಾಯದವರೂ ಕೊಡಗಿನಲ್ಲಿ ಇದ್ದಾರೆಂಬ ಅರಿವು ಕರ್ನಾಟಕದ ಜನತೆಯಲ್ಲಿ ಮೂಡಿಸಿದಂತಾಗುತ್ತದೆ.

—ಕೆ. ಗಾಯತ್ರಿ ಪದ್ಮಾಜಿ ಮೈಸೂರು

### ಮುದ ನೀಡಿತು

'ಅಂಕೋಲಾದ ವಿಭೂತಿ ಫಾಲ್ಸ್' (ನಾಗರಾಜ ಮಂಜಗುಣಿ) ಲೇಖನ ಓದಿ ಖುಷಿ ಆಯಿತು. ಒಮ್ಮೆ ವಿಭೂತಿ ಪಾಲ್ಸ್ ನೋಡಬೇಕೆನಿಸಿತು.

—ರತ್ನಾಕರ ಹೆಗಡೆಕಟ್ಟೆ, ಮೂಡುಬಿದರೆ

### ಸಂದರ್ಶನ ಚೆನ್ನಾಗಿದೆ

'ಮಾತುಕತೆ' ಅಂಕಣದಲ್ಲಿ ಬೋಳುವಾರರ ಜತೆ ಸಂದರ್ಶನ (ಬಿ.ಎಂ. ಹನೀಫ್) ಬರಹ ಆಕರ್ಷಕವಾಗಿದೆ.

—ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

### ಅರ್ಥಪೂರ್ಣ

'ಕೈ ಬರಹವೂ, ವ್ಯಕ್ತಿತ್ವವೂ...' (ಕೆ.ಎನ್. ಭಗವಾನ್) ಲೇಖನ ಅರ್ಥಪೂರ್ಣವಾಗಿದೆ. ಲೇಖಕರು ಹೇಳಿದಂತೆ ನಮ್ಮ ಕೈಬರಹ ನೈಪುಣ್ಯತೆಯನ್ನು ಪಡೆದಷ್ಟೂ ನಮ್ಮಲ್ಲಿ ಸ್ವಾಭಿಮಾನ ಬೆಳೆದು, ಆತ್ಮವಿಶ್ವಾಸ ಹೆಚ್ಚಾಗಿ ನಮ್ಮ ನಡೆ ನುಡಿಯಲ್ಲೂ ಪರಿಪಕ್ವತೆ ಕಂಡು ಬರುತ್ತದೆ.

—ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

### ಮಾಹಿತಿಪೂರ್ಣ

ಆರೋಗ್ಯ ಪುಟದಲ್ಲಿ 'ಸಂತಾನ ಭಾಗ್ಯಕ್ಕೆ ಹೊಸದಾರಿ; 'ಐವಿಎಫ್'ನಲ್ಲಿ ಸುಧಾರಿತ ತಂತ್ರಜ್ಞಾನ' (ಉಮಾ ಅನಂತ್) ಲೇಖನ ಮಾಹಿತಿಪೂರ್ಣ. ಮಹಿಳೆಗೆ 35 ವರ್ಷದ ನಂತರ ಅಂಡಾಣು ಉತ್ಪಾದನಾ ಸಾಮರ್ಥ್ಯ ಕುಂಠಿತವಾಗಿ ಗರ್ಭ ಧರಿಸಲು ಅಸಮರ್ಥಳಾಗುವುದರಿಂದ ಈ ತಂತ್ರಜ್ಞಾನ ವರದಾನ. ಕೆಲವೊಮ್ಮೆ ಐ.ವಿ.ಎಫ್. ವೈಫಲ್ಯವಾಗಲೂ ಬಹುದು.

—ಪ್ರಾರ್ಥನಾ ಹೇಮಂತ ಕುಮಾರ ಬೆಂಗಳೂರು

### ಕಥೆಗಳು ಚೆನ್ನಾಗಿವೆ

ಕಥೆ 'ಧರೆಗಿಳಿದ ನಕ್ಷತ್ರ' (ಚಂದ್ರಕಾಂತ ಮ. ತಾಳಿಕೋಟೆ) ಚೆನ್ನಾಗಿದೆ. ಸಣ್ಣಕಥೆ 'ಗೋಸುಂಬೆ' (ಸದಾನಂದ ಪೈ, ಬಿ. ಸಾಗರ) ಅರ್ಥವತ್ತಾಗಿದೆ. ಮೇಲಧಿಕಾರಿಗಳು ಕೆಳಹಂತದ ನೌಕರರ ಬಗ್ಗೆ ತೋರುವ ನಿರ್ಲಿಪ್ತತೆ, ಶಿಸ್ತಿನ ಬೋಧನೆ, ಅದನ್ನು ಅವರೇ ಮರೆಯುವ ಸಂಗತಿ ಕಥೆಯಲ್ಲಿ ನಿರೂಪಿತವಾಗಿದೆ.

—ರಾಜಶೇಖರ ಹಾದಿಮನಿ ಧಾರವಾಡ, ಸುಂದರ್ ಬೆಂಗಳೂರು, ಎಸ್. ವಿಜಯಕುಮಾರಿ ಬೆಂಗಳೂರು

### ಖುಷಿಯಾಯಿತು

'ಶ್ರಾವಣ ಮಾಸದಲ್ಲಿ ಚೂಡಿ ಪೂಜೆ' (ವಿ.ಎಸ್.ನಾಯಕ ಬಳಕೂರು) ಬರಹ ಹಾಗೂ ಚಿತ್ರ ನೋಡಿ ಖುಷಿಯಾಯಿತು.

—ನಾರಾಯಣ ಯಾಜಿ, ಶಿರಾಲಿ

### ಪ್ರವಾಸ ಲೇಖನ

ಪ್ರವಾಸ ಲೇಖನ 'ಸಿಟಿ ಆಫ್ ಗೌಡಿ' (ಸಂಜೀವ ಹಿರೇಮಠ) ಸೊಗಸಾಗಿದೆ. ಪ್ರತಿ ವರ್ಷ ಸುಮಾರು ಎಂಬತ್ತು ಲಕ್ಷ ಜನರು ಈ ನಗರಕ್ಕೆ ಭೇಟಿ ನೀಡುತ್ತಿದ್ದು ಕೇಳಿ ಅದರಲ್ಲಿ ನಾನೂ ಒಬ್ಬನಾಗುವ ಮನಸ್ಸಾಯಿತು.

—ವಿ. ಹೇಮಂತಕುಮಾರ ಬೆಂಗಳೂರು

### ಮಂಥರೆ ಕಥೆ

ಎರಡು ಕಂತುಗಳಲ್ಲಿ (ಸುಧಾ ಆ.23 ಹಾಗೂ 30) ಪ್ರಕಟವಾದ ಡಾ. ಜಿ. ಕೃಷ್ಣಪ್ಪ ಅವರ ಕಥೆ 'ಮಂಥರೆ' ಅಪೂರ್ವವಾಗಿ ಗಮನಸೆಳೆಯಿತು.

—ಎ.ಡಿ. ನಂಜುಂಡಸ್ವಾಮಿ ಮೈಸೂರು

ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ'ನ ಮೂಲ ಕೃತಿಗೆ ನಿಷ್ಠರಾಗಿ ಕಾವ್ಯದ ನುಡಿಗಟ್ಟು ಮತ್ತು ರೂಪಕಗಳನ್ನು ಕಥೆಯಲ್ಲಿ ಬಳಸಿಕೊಂಡಿರುವುದು ಶ್ಲಾಘ್ಯವಾಗಿದೆ. ಅಲ್ಲದೆ ಓದುಗರಿಗೆ ಮೂಲ ಮಹಾ ಕಾವ್ಯವನ್ನು ಓದಲು ಪ್ರೇರಣೆ ನೀಡುವಂತಿದೆ.

—ಪ್ರೊ. ಕೆ.ಎಸ್. ಭಗವಾನ್ ಮೈಸೂರು

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ



ಶ್ರೀ ಸಾಯಿಬಾಬಾ ಉಪಾಸಕರು
ಕೇವಲ 5 ದಿನದಲ್ಲಿ
100% ಪರಿಹಾರ ಶತಸಿದ್ಧ
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬೆಂಗಳೂರು. 9620444460